ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ, ದಿನಾಂಕ:17–03–2018 ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾಸ/940/2017–18

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಅಭಿಯಂತರರು (ದಾಸರಹಳ್ಳಿ) ವಲಯಕ್ಕೆ 2017–18ನೇ ಸಾಲಿನ ಪಾಲಿಕೆಯ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–2415ರಲ್ಲಿ ವಾರ್ಡ್–13ಕ್ಕೆ ಪ್ರಸ್ತಾಪಿತ 03 ಕಾಮಗಾರಿಗಳ ಒಟ್ಟು ಮೊತ್ತವಾದ ರೂ:120.00 ಲಕ್ಷಗಳ ಕಾಮಗಾರಿಗಳಿಗೆ ಜಾಬ್ ಕೋಡ್ ಪಡೆದಿದ್ದು ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸ	ಕಾಮಗಾರಿ ವಿವರ	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ	ಜಾಬ್ ಸಂಖ್ಯೆ
1	Improvements of Asphalting at Balance road at Shoting Benglow road and other roads in Mallasandra ward No.13, Shettyhalli sub division	50.00	013–18–000100
2	Improvements of Asphalting at 8th cross and other roads santhosh nagara in mallasandra ward No.13 shettyhalli sub division	20.00	013–18–000102
3	Improvements of asphalting in mallasandra ward No.13 shettyhalli sub division	50.00	013–18–000103

ಮೇಲ್ಕಾಣಿಸಿದ ಕಾಮಗಾರಿಗಳನ್ನು ಪಾಲಿಕೆ ಸದಸ್ಯರಾದ ಶ್ರೀ.ಲೋಕೇಶ್ ರವರು ಪತ್ರದಲ್ಲಿ ಕೋರಿರುವಂತೆ, ಹಾಗೂ ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರು ಮೇಲ್ಕಾಣಿಸಿದ 03 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ ಪ್ರಸ್ತಾವನೆಗೆ ಶಿಫಾರಸ್ಸು ಮಾಡಿರುತ್ತಾರೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಇ/262/ವೆಚ್ಚ–12/17, ದಿನಾಂಕ:22–04–2017 ರಲ್ಲಿ ಸಂಸ್ಥೆಯ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಪ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್– ಹಿಂದಿನ ಕೆ.ಎಲ್.ಎ.ಸಿ) ಸಂಸ್ಥೆಯ ಮೂಲಕ ಗರಿಷ್ಟ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ದಿನಾಂಕ:01–04–2017 ರಿಂದ ಒಂದು ವರ್ಷದ ಅವಧಿಗೆ ಷರತ್ತುಗಳಿಗೊಳಪಟ್ಟು ವಿನಾಯಿತಿ ನೀಡಿದೆ.

ಮೇಲ್ಕಾಣಿಸಿದ ವಾರ್ಡ್–13ರ ವ್ಯಾಪ್ತಿಯಲ್ಲಿ ಪ್ರಸ್ತಾಪಿತ 03 ಕಾಮಗಾರಿಗಳ ಒಟ್ಟು ಮೊತ್ತವಾದ ರೂ:120.00 ಲಕ್ಷಗಳ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿಕೊಡುವ ಬಗ್ಗೆ ಸೂಕ್ತ ನಿರ್ಣಯ ಕೋರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಮಾನ್ಯ ಆಯುಕ್ತರು ಸಂಖ್ಯೆ:ಪಿ.ಎಸ್.ಆರ್(ಜಿ)8226/2017–18 ದಿನಾಂಕ:24–02–2018 ರಂತೆ ಅನುಮೋದಿಸಿರುವ ಮೇರೆಗೆ ಪ್ರಧಾನ

Scanned by CamScanner

ಅಭಿಯಂತರರ ಕಛೇರಿ ಸಂಖ್ಯೆ:11867/2017-18, ದಿ:27-02-2018 ರಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಪ್ರಧಾನ ಅಭಿಯಂತರರು ರವರ ದಿನಾಂಕ:27-02-2018ರ ಟಿಪ್ಪಣಿ.

ನಿರ್ಣಯ:- ಪ್ರಧಾನ ಅಭಿಯಂತರರವರ ದಿ:27/02/2018 ರ ಟಿಪ್ಪಣಿಯ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು, ತುರ್ತಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಅವಶ್ಯಕತೆ ಇರುವುದಾಗಿ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಕಾಮಗಾರಿಗಳನ್ನು ಎ. ಕೆ. ಆರ್. ಐ. ಡಿ. ಎಲ್. ಸಂಸ್ಥೆಯ ವತಿಯಿಂದ ಕೈಗೊಳ್ಳಲು ನಿಯಮಾನುಸಾರ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಿತು.

ಅಧ್ಯಕ್ಷರು
ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
[illegible] ಮಹಾನಗರ ಪಾಲಿಕೆ

ಕ್ರ. ಸಂ	ಶ್ರೀಯುತರ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
1	ಇಮ್ರಾನ್ ಪಾಷ	ಅಧ್ಯಕ್ಷರು	
2	ಎಸ್.ಪಿ.ಹೇಮಲತಾ	ಸದಸ್ಯರು	
3	ದೀಪ ನಾಗೇಶ್	ಸದಸ್ಯರು	Deepanagesh
4	ಶ್ವೇತ ವಿಜಯಕುಮಾರ್	ಸದಸ್ಯರು	Swetha.
5	ಹೇಮಲತಾ ಸತೀಶ್. ಶೇಟ್	ಸದಸ್ಯರು	HShet
6	ಯಶೋಧ ಲಕ್ಷ್ಮೀಕಾಂತ	ಸದಸ್ಯರು	Yashoda. L
7	ನೇತ್ರಾ ಪಲ್ಲವಿ.ಎಂ.	ಸದಸ್ಯರು	Nethra Pallavi M
8	ಹಾ ನಾ ಭುವನೇಶ್ವರಿ (ಭುವನ)	ಸದಸ್ಯರು	
9	ಸುಜಾತ. ಡಿ.ಸಿ.ರಮೇಶ್	ಸದಸ್ಯರು	Sujatha
10	ಮಂಜುಳ	ಸದಸ್ಯರು	ಮಂಜುಳ
11	ಎಸ್.ಜಿ. ನಾಗರಾಜ್	ಸದಸ್ಯರು	

Scanned by CamScanner